ನೀವು ವಸೂಲು ಮಾಡುವುದಕ್ಕೆ ತಯಾರಿಲ್ಲ. ಏನಿದು? ರಾಜಕೀಯ ದಿಟ್ಟತನವೋ? ರಾಜಕೀಯ ಇಚ್ಛಾಶಕ್ತಿಯೋ? ಮಾರ್ಚ್ ೯೮ಕ್ಕೆ ಎಕ್ಸೈಸ್‌ನಲ್ಲಿ ೮ ಪರ್ಸೆಂಟ್ ಇನ್‌ಕ್ರೀಸ್ ಆ್ಯಸ್ ಎಗನೆಸ್ಟ್ ೨೪ ಪರ್ಸೆಂಟ್. ಟ್ಯಾಕ್ಸ್ ಮತ್ತು ನಾನ್-ಟ್ಯಾಕ್ಸ್‌ನಲ್ಲಿ ಮಾರ್ಚ್ ೯೪ರಲ್ಲಿ ೨೩ ಪರ್ಸೆಂಟ್ ಇನ್‌ಕ್ರೀಸ್, ಮಾರ್ಚ್, ೯೭ರ ಅಂತ್ಯಕ್ಕೆ ೯ ಪರ್ಸೆಂಟ್ ಇನ್‌ಕ್ರೀಸ್ ಮತ್ತು ಮಾರ್ಚ್ ೯೮ಕ್ಕೆ ೧೧ ಪರ್ಸೆಂಟ್ ಇನ್‌ಕ್ರೀಸ್ ಆಗಿದೆ. That is what you are doing managing. Is it a sound economy? I will tell you it is most unsound, and you are back - tracking. It is back-tracking the management of the finance. It is going adverse to the development, I think. It is not going to help the State. ಕರ್ನಾಟಕ ಇವ್ಹೊತ್ತು ಆರ್ಥಿಕವಾಗಿ ನುಚ್ಚುನೂರಾಗುತ್ತಿದೆ. ಆದುದರಿಂದ, ಅದರ ಅಂಕಿ-ಅಂಶಗಳನ್ನು ಹೆಚ್ಚಾಗಿ ಮತ್ತೆ ನಾನು ಕೊಡಲು ಇಚ್ಛಿಸುವುದಿಲ್ಲ. In 8th five-year plan, you could not achieve target. ಹೆಚ್. ಕೆ. ಡಿ. ಬಿ. ಮತ್ತಿತರ ವಿಚಾರಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ಏಕೆಂದರೆ, ಸಮಯ ಬಹಳ ಹಿಡಿಯುತ್ತದೆ.

ಅಧ್ಯಕ್ಷರು : ತಮಗೆ ಮಾತನಾಡಲು ಇನ್ನು ಎಷ್ಟು ಹೊತ್ತು ಬೇಕಾಗಬಹುದು?

ಶ್ರೀ ಎಂ. ವೀರಪ್ಪ ಮೊಯಿಲಿ : ಇನ್ನು ಅರ್ಧ ಗಂಟೆ ಬೇಕಾಗುತ್ತದೆ.

ಅಧ್ಯಕ್ಷರು : ನಮಗೆ ಇಂದು ಸಂಜೆ ೬.೩೦ ಗಂಟೆಗೆ ಒಂದು ಸಮಾರಂಭವಿದ್ದು, ಕರ್ನಾಟಕ ವಿಧಾನಮಂಡಲ ಇತಿಹಾಸದ ಸಂಪುಟಗಳನ್ನು ಬಿಡುಗಡೆ ಮಾಡಬೇಕಾಗಿರುವುದರಿಂದ, ಸದರಿ ಸಮಾರಂಭದಲ್ಲಿ ಮಾನ್ಯ ಸದಸ್ಯರುಗಳೆಲ್ಲರೂ ಹಾಜರಿರಬೇಕಾಗುತ್ತದೆ. ಆದುದರಿಂದ, ಈಗ ಸದನವನ್ನು ಮುಂದೂಡಿದರೆ ಮತ್ತೆ ಸೇರುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲದಿದ್ದರೆ, ನಾಳೆ ಬೆಳಿಗ್ಗೆ ಸದನ ಸೇರಿದಾಗ ನನ್ನ ಭಾಷಣವನ್ನು ಮುಂದುವರೆಸುತ್ತೇನೆ.

೪. ಪ್ರಕಟಣೆ

ವಿಷಯ : ವಿಧಾನ ಮಂಡಲದ ಇತಿಹಾಸ ಸಂಪುಟ ಬಿಡುಗಡೆ.

ಅಧ್ಯಕ್ಷರು : ಒಂದು ಪ್ರಕಟಣೆ ಇದೆ. ವಿಧಾನ ಮಂಡಲದ ಇತಿಹಾಸ ಸಂಪುಟಗಳನ್ನು ಈ ದಿನ ಸಂಜೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಬಿಡುಗಡೆ ಮಾಡಲು ಸಮಾರಂಭ ಏರ್ಪಡಿಸಲಾಗಿದೆ. ಸದರಿ ಸಮಾರಂಭಕ್ಕೆ ಮಾನ್ಯ ಸದಸ್ಯರೆಲ್ಲರೂ ಆಗಮಿಸಬೇಕೆಂದು ತಿಳಿಸುತ್ತಿದ್ದೇನೆ. ಮೊಯಿಲಿಯವರೆ, ತಾವು ನಾಳೆ ತಮ್ಮ ಭಾಷಣ ಮುಂದುವರೆಸಿ ಬೇಗ ಮುಗಿಸಿದರೆ ಮುಂದಿನ ಕಲಾಪಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಬೇರೊಂದು ಸಲಹೆ ಬಂದಿದ್ದರಿಂದ ವಂದನಾ ನಿರ್ಣಯವನ್ನು ಇನ್ನೊಂದು ಸಲ ತೆಗೆದುಕೊಳ್ಳಬೇಕೆಂದಿದೆ. ಆದುದರಿಂದ, ಇದನ್ನು ಬಿ. ಎ.ಸಿ. ಯಲ್ಲಿ ತರಬೇಕಾಗುತ್ತದೆ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿಯೇನೆಂದರೆ, ಕೊಡಗಿನ ವೀರರಾಜ, ಲಿಂಗರಾಜ ಗದ್ದುಗೆ ಬಗ್ಗೆ ನಾವು ಮತ್ತು ಶಿವಪ್ಪನವರು ತಮ್ಮ ಬಳಿ ಬಂದು ಪ್ರಸ್ತಾಪಿಸಿದ್ದೆವು.

ಅಧ್ಯಕ್ಷರು: ಈಗ ೬.೩೦ ಗಂಟೆಗೆ ಒಂದು ಸಮಾರಂಭವಿದೆ. ಆದರೆ, ಕೆ. ಎ. ಪಿ.ಎಲ್ ವಿಚಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಒಂದು ಹೇಳಿಕೆಯಾಗಬೇಕು, ಬಿ ಪಿ ಎಲ್ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಹೇಳಿಕೆ ಆಗಬೇಕು ಹಾಗೂ ಸುರತ್ಕಲ್ ಗಲಭೆ ವಿಚಾರದಲ್ಲಿ ಗೃಹಮಂತ್ರಿಗಳಾದ ಪಿ. ಜಿ. ಆರ್. ಸಿಂಧ್ಯ ಅವರಿಂದ ಒಂದು ಹೇಳಿಕೆಯಾಗಬೇಕು. ಇದಕ್ಕೆಲ್ಲ ಈಗ ಸಮಯವೆಲ್ಲಿದೆ? ನೀವೇ ನೋಡುತ್ತಿದ್ದೀರಲ್ಲಾ. ನೀವು ಪ್ರಸ್ತಾಪಿಸುತ್ತಿರುವ ವಿಚಾರವನ್ನು ನಾಳೆ ದಿವಸದ ಕಾರ್ಯಕಲಾಪದ ಪಟ್ಟಿಗೆ ಸೇರಿಸಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು : ತಮ್ಮ ಅಸಹಾಯಕತೆಯನ್ನು ಒಪ್ಪಿಕೊಳ್ಳುತ್ತೇ. ಆದರೆ, ಅಲ್ಲಿ ಶಾಂತಿ ಸುವ್ಯವಸ್ಥೆಯ ವಿಚಾರ.....

ಅಧ್ಯಕ್ಷರು : ತಮಗೆ ಹೇಳಬೇಕೆಂದರೆ, ಅಜೆಂಡಾ ಆಗಲೇ ಸರ್ಕ್ಯುಲೇಟ್ ಆಗಿದ್ದರಿಂದ ನಾನು ವಿಶೇಷ ಸೂಚನೆ ಕೊಟ್ಟು ನಾಳೆ ದಿವಸದ ಕಾರ್ಯಕಲಾಪಗಳ ಪಟ್ಟಿಗೆ ಸೇರಿಸಿದ್ದೇನೆ.

9. ಕೊಡಗಿನ ವೀರರಾಜ, ಲಿಂಗರಾಜ ಗದ್ದುಗೆ ಬಗ್ಗೆ.

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಅಧ್ಯಕ್ಷರೆ, ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ, ಅದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿ ಬೆಂಕಿ ಹತ್ತಿ ಉರಿಯುತ್ತಿದೆ, ಜಿಲ್ಲಾ ಪ್ರಸ್ತಾಪ ಮಾಡುವುದಿಲ್ಲ, ಅದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿ ಬೆಂಕಿ ಹತ್ತಿ ಉರಿಯುತ್ತಿದೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳಿದ್ದು, ಗೃಹಮಂತ್ರಿಗಳ ಗಮನಕ್ಕೆ ಈ ವಿಷಯ ಬಂದಿರಬಹುದು. ಅಲ್ಲಿರುವ ಜಾಗ ಯಾರದು ಎಂದು ಗೊತ್ತಿಲ್ಲ. ಅದು ಪ್ರಾಚ್ಯವಸ್ತು ಇಲಾಖೆಯ ಕೈಯಲ್ಲಿದ್ದರೂ ನಮ್ಮ ಕೈಯಲ್ಲಿದೆ ಎಂದು ಅವರು ಹೇಳುತ್ತಾರೆ. ಅಲ್ಲಿ ಮನೆಗಳಾಗುತ್ತಿದೆ, ಮಸೀದಿಯಾಗುತ್ತಿದೆ. ಎಲ್ಲರೂ ಅಲ್ಲಿಗೆ ಬಂದು ಜಾಗವನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆ. ಆದರೆ, ಯಾರೂ ಕೂಡ ಆ ಕುರಿತು ಮಾತನಾಡುತ್ತಿಲ್ಲ. ರಾಜರ ಗದ್ದುಗೆ ಸಂಪೂರ್ಣ ಕೈತಪ್ಪಿ ಹೋಗುವಂಥ ಹಂತದಲ್ಲಿದೆ. ಅವರು ರಿಪೇರಿ ಮಾಡಬೇಕು, ಮಾಡುತ್ತಿಲ್ಲ. ಕೊಡಗು ಬಗ್ಗೆ ತಮಗೆ ಗೊತ್ತಿದೆ. ಕೊಡಗಿನ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಕೊಡಗು ಪ್ರತ್ಯೇಕವಾಗಬೇಕೆಂದು ಕೇಳುತ್ತಿರುವುದಕ್ಕೆ ಕಾರಣವಿದೆ. ಕೊಡಗನ್ನು ನಿರ್ಲಕ್ಷಿಸಿದ್ದಾರೆಂಬ ಭಾವನೆ ಅವರ ಮನಸ್ಸಿನಲ್ಲಿದೆ. ನಿನ್ನೆ ನಾನು ಟಿ.ವಿ.ಯಲ್ಲಿ ವೀಕ್ಷಿಸಿದೆ, ಕಾವೇರಿ ಯೋಜನೆಗೆ ನಾವು ಬಹಳಷ್ಟು ಹಣ ಖರ್ಚು ಮಾಡಿದ್ದೇವೆ, ಆದರೆ, ಅಲ್ಲಿ ಏನೂ ಪ್ರಯೋಜನವಾಗುತ್ತಿಲ್ಲ. ಕಾವೇರಿ ಬಗ್ಗೆ ನಾವೆಲ್ಲರೂ ಭಾರಿ ಚರ್ಚೆ ಮಾಡುತ್ತೇವೆ, ಇಲ್ಲಿ ಎಲ್ಲರೂ ಕೈಮುಗಿಯುತ್ತೇವೆ. ಕಾವೇರಿ ನದಿಯ ಉಗಮ ಸ್ಥಾನದಲ್ಲಿ ಒಂದು ಕೆಲಸವಾಬೇಕು, ಆಗುತ್ತಿಲ್ಲ. ಈಗ ಕೊಡಗಂತೂ ಸಂಪೂರ್ಣ ನಿರ್ಲಕ್ಷ್ಯಕ್ಕೊಳಗಾಗಿದೆ, ಗದ್ದುಗೆಯಂತೂ ಬೆಂಕಿ ಹತ್ತಿ ಉರಿಯುತ್ತಿದೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡಲು ಇಚ್ಛಿಸುವುದಿಲ್ಲ. ಏನಾಗುತ್ತದೋ ಆಗಲಿ, ನಂತರ ಬೇಕಾದರೆ ಸರ್ಕಾರ ಅದರ ಬಗ್ಗೆ ಗಮನಹರಿಸಲಿ.